ದೇವತೆಯ ಪೂಜೆ ಇತ್ಯಾದಿಗಳು ಇಡೀ 'ಮನೆ'ಯ ಸುತ್ತ ಒಂದು ಆಧ್ಯಾತ್ಮಿಕ ಪರಿಸರವನ್ನು ಸೃಷ್ಟಿಸುತ್ತವೆ. ಸಾಂಪ್ರದಾಯಿಕವಾಗಿ ಮನೆಮನೆಗಳಲ್ಲಿ ಕತ್ತಲಾಯಿತೆಂದರೆ ದೀಪ ಬೆಳಗುವುದು, ದೇವರ ಕೋಣೆಯಲ್ಲಿ ಭಜನೆ ಮಾಡುವುದು ಇತ್ಯಾದಿ ಪದ್ಧತಿಗಳಿವೆ. ಬೆಳಗಾಯಿತೆಂದರೆ ಮನೆ ಮುಂದೆ ಗುಡಿಸಿ, ಸಾರಿಸಿ ಸ್ವಚ್ಛಗೊಳಿಸಿ, ಹೊಸ್ತಿಲ ಪೂಜೆ, ದೇವರ ಪೂಜೆ ನಡೆಯುತ್ತದೆ. ಈ ಸಾಂಪ್ರದಾಯಿಕ ಚಿತ್ರ, ಆಧುನಿಕ ನಗರ ಜೀವನದಲ್ಲಿ ಮುಂದುವರಿಯುವುದೆ? ಸಾಮಾಜಿಕ ಜನಜೀವನ ಬದಲಾದಂತೆ, ಈ ಆಚರಣೆಗಳೂ ಇಲ್ಲದಾಗುತ್ತವೆ; ಅದರ ಜಾಗದಲ್ಲಿ ನಗರ ಸಂಸ್ಕೃತಿಯ ಆಚರಣೆಗಳು ಬಂದು ಸೇರುತ್ತವೆ.

### 'ಮನೆ'ಯ ಪರಿಧಿಯಾಚೆಗೆ

ನೈತಿಕ, ಆಧ್ಯಾತ್ಮಿಕ ಮೌಲ್ಯಗಳಲ್ಲಿ ಮನೆಯೆಂಬುದು ಸೀಮಿತವಾದ ಭಾವನೆಯಾಗಿಯೂ ಪರಿಗಣಿಸಲ್ಪಟ್ಟಿದ್ದೆ. ತನ್ನ ಕುಟುಂಬ, ತನ್ನವರು ಎಂಬ ಸಂಕುಚಿತ ಭಾವನೆಯನ್ನು ಮೀರಿ ಹೋಗಬೇಕು; ಜಗತ್ತೇ ತನ್ನ ಮನೆಯಾಗಬೇಕು ಎಂಬ ಆದರ್ಶ ಅಲ್ಲಿದೆ. ಕುವೆಂಪು ಅವರ ಪ್ರಸಿದ್ಧ ಕವನ, '**ಓ ನನ್ನ ಚೇತನ, ಆಗು ನೀ ಅನಿಕೇತನ**' ಎಂಬುದರ ಆಶಯ ಇದೇ ಆಗಿದೆ. ಆಧ್ಯಾತ್ಮಿಕ ಭಾವನೆಗಳಿಂದ ಪ್ರೇರಿತನಾದ ವ್ಯಕ್ತಿಯೊಬ್ಬನು ತ್ಯಾಗ-ವೈರಾಗ್ಯಗಳಿಂದ ಕೂಡಿ 'ಮನೆ ಬಿಟ್ಟು' ಹೋಗುವುದು ಆತ್ಮಸಾಕ್ಷಾತ್ಕಾರಕ್ಕಾಗಿ. ಅವನ ಆದರ್ಶ ವಿಶ್ವವನ್ನೇ ಪ್ರೀತಿಸುವುದು, ಮನೆಯೆಂಬ ಸೀಮಿತ ಪರಿಧಿಯನ್ನು ದಾಟಿ ಹೋಗುವುದು. ಸ್ವಾಮಿ ವಿವೇಕಾನಂದರ ಪ್ರಸಿದ್ಧ ಕವನ 'ಸಂನ್ಯಾಸಿ ಗೀತೆ'ಯಲ್ಲಿ ಇದನ್ನು ಹೀಗೆ ಚಿತ್ರಿಸಲಾಗಿದೆ:

*ಗಗನವೇ ಮನೆ! ಹಸುರೆ ಹಾಸುಗೆ!*
*ಮನೆಯು ಸಾಲ್ವುದೆ ಚಾಗಿಗೆ?*

ಸಂನ್ಯಾಸ ಸಂಪ್ರದಾಯದಲ್ಲಿ ಸಂನ್ಯಾಸಿಯಾದವನು ಒಂದು ಪ್ರದೇಶದಲ್ಲಿ ಮೂರು ದಿನ ಮಾತ್ರ ತಂಗಬೇಕು; ಪರಿವ್ರಾಜಕನಾಗಿ ಅಲೆದಾಡುತ್ತ ಭಿಕ್ಷೆ ಬೇಡಿ ಜೀವಿಸುವುದೇ ಅವನ ಜೀವನ. ಇದೊಂದು ಪವಿತ್ರ ಆದರ್ಶ. ಇಂದಿಗೂ ಈ ಬಗೆಯ ಆದರ್ಶವನ್ನು ಪಾಲಿಸುವವರಿದ್ದಾರೆ. ಒಂದು ಸ್ಥಳಕ್ಕೆ ಅಂಟಿಕೊಂಡಿರಬಾರದು, ಅದರಿಂದ ಒಂದು ಪ್ರದೇಶದ ಮೇಲೆ ವ್ಯಾಮೋಹ ಬೆಳೆಯುವುದು. ಸಂನ್ಯಾಸಿ ಅದನ್ನು ಮೀರಿ ಹೋಗಬೇಕು ಎಂಬುದೇ ಇದರ ಹಿಂದಿನ ಆಶಯ. ಮನೆ, ಮಠ, ಊರು ಇತ್ಯಾದಿಗಳೆಲ್ಲವೂ, ವಿಶ್ವವ್ಯಾಪಕ ಆದರ್ಶವನ್ನು ಇಟ್ಟುಕೊಂಡ ಸಂನ್ಯಾಸಿಗೆ ಮಿತಿಯಾಗಿ ಕಾಣಿಸುತ್ತವೆ. ಅವುಗಳ ಪರಿಧಿಯನ್ನು ಮೀರಿ ಹೋಗುವುದೇ ಅವನ ವಿಧಾನ. 'ಮನೆಯಿಲ್ಲದಾಗು'ವುದು ಅವನ ಪಾಲಿಗೆ ವಿಶ್ವವಿಶಾಲ ತತ್ತ್ವವನ್ನು ಅನುಸರಿಸುವುದರ ಒಂದು ಸಂಕೇತ ಅಷ್ಟೇ. ಜನಸಾಮಾನ್ಯರೆಲ್ಲ ಆಪ್ಯಾಯಮಾನವೆಂದು ಭಾವಿಸುವ ಮನೆ ಅವನ ಪಾಲಿಗೆ ಒಂದು ಬಂಧನ. ಆದರೆ ಅದು ಕೇವಲ ಅವನ ಆದರ್ಶ. ಅವನ ದೃಷ್ಟಿಯಲ್ಲಿ ಆತ್ಮವೇ ಅವನ ನಿಜವಾದ ನೆಲೆ, ನಿಜವಾದ ಮನೆ. 'ಅಲ್ಲಿದೆ ನಮ್ಮನೆ' ಎಂಬುದನ್ನು ಅವನು ನಿಜವಾಗಿಯೂ ಕಂಡುಕೊಳ್ಳಲು ಯತ್ನಿಸುತ್ತಾನೆ.

### ನೆಮ್ಮದಿಯ ತಾಣ

ಮುಂಬೈ, ದೆಹಲಿ, ಬೆಂಗಳೂರು ಮುಂತಾದ ಬೃಹತ್ ನಗರಗಳಲ್ಲಿ ಬೀದಿ ಬದಿಯಲ್ಲಿ ಜೋಪಡಿಗಳನ್ನು ಕಟ್ಟಿಕೊಂಡು ಸಾವಿರಾರು ಕುಟುಂಬಗಳು ಬದುಕುತ್ತಿವೆ. ಬಡತನ, ಅನಕ್ಷರತೆ, ರೋಗ-ರುಜಿನ, ಕಾರ್ಮಿಕರ ಸಮಸ್ಯೆಗಳ ನಡುವೆಯೂ ಜೀವನ ನಡೆಯುತ್ತಿದೆ. ಇದಕ್ಕೆ ವಿರುದ್ಧವಾಗಿ ದೊಡ್ಡ ದೊಡ್ಡ ಬಂಗಲೆಗಳಲ್ಲಿ ಐಷಾರಾಮಿಯಾಗಿ ಬದುಕುವ, ಇಡೀ ಭೂಮಂಡಲವೇ ತನ್ನದು ಎಂಬಂತೆ ವರ್ತಿಸುವ ಕೋಟ್ಯಾಧೀಶರೂ ಇದ್ದಾರೆ. ಆದರೆ ಎಲ್ಲರೂ 'ಮನೆ'ಯೆಂದು ಗುರುತಿಸಿಕೊಳ್ಳುವ ತಮ್ಮ ನಿವಾಸದಲ್ಲಿ ಬಯಸುವುದು ಶಾಂತಿ, ನೆಮ್ಮದಿಯನ್ನು. ತನ್ನ ಕುಟುಂಬ ಅಲ್ಲಿದೆ; ತನ್ನವರು ಅಲ್ಲಿ ಇರುತ್ತಾರೆ. ತಾನು ಎಲ್ಲಿಗೇ ಹೋದರೂ ಅಲ್ಲಿಗೇ ಮರಳಬೇಕು ಎಂಬುದು ಎಲ್ಲರ ನಿರೀಕ್ಷೆ. ಆದರೆ ಇದು ಎಷ್ಟರಮಟ್ಟಿಗೆ ನಿಜ? ಎಲ್ಲರೂ ಒಂದಲ್ಲ ಒಂದು ದಿನ ಈ 'ಮನೆ'ಯನ್ನು ಬಿಡಲೇಬೇಕು. ಈ ಅನಿವಾರ್ಯತೆಯ ಅರಿವಿದ್ದೂ ಪ್ರತಿಯೊಬ್ಬರ ಬದುಕು 'ಮನೆ'ಯ ಸುತ್ತಲೇ ಸುತ್ತುತ್ತಿದೆ. ಬದುಕಿದ್ದಷ್ಟು ದಿನ, ತನ್ನವರ ಜೊತೆಗೆ ಶಾಂತಿ, ನೆಮ್ಮದಿ, ಆನಂದಗಳಿಂದ ಬದುಕಬೇಕು ಎಂಬ ಆಶಯ - ಅದು ಎಷ್ಟೇ ತಾತ್ಕಾಲಿಕವಾಗಿರಲಿ, ಎಲ್ಲರನ್ನೂ ಮುನ್ನಡೆಸುವ ಶಕ್ತಿಯಾಗಿದೆ. ಅದಕ್ಕೆ ಮಾನವನ ಬದುಕಿನಲ್ಲಿ ಮೂಡಿಬಂದ ಕೇಂದ್ರಬಿಂದುವೇ 'ಮನೆ'. ಆದರೆ ಈ ಕಲ್ಪನೆಯ ಸುತ್ತ ಹಬ್ಬಿಕೊಂಡಿರುವ ಭಾವನಾತ್ಮಕ ಬದುಕೇ ಅತ್ಯಂತ ವಿಶಿಷ್ಟವಾದುದು.

ಇತ್ತೀಚಿನ ದಿನಗಳಲ್ಲಿ ಮನೆಯಿಲ್ಲದವರಿಗೆ ಮನೆ ಕಟ್ಟಿಸಿ ಕೊಡುವುದು, ವಸತಿ ಯೋಜನೆ ಮೂಲಕ ಜನರ ಬದುಕಿಗೆ ಮೂಲ ನೆಲೆಯನ್ನು ಕಲ್ಪಿಸುವುದು ನಮ್ಮ ಸರ್ಕಾರಗಳ ಘೋಷಣೆಯಾಗಿದೆ. ಲೌಕಿಕ ಜೀವನದಲ್ಲಿ ಇದೊಂದು ಉತ್ತಮ ಸೇವಾಕಾರ್ಯವೇನೋ ನಿಜ. ಆದರೆ ಜನ ತಮ್ಮೆಲ್ಲ ಆಶೋತ್ತರಗಳನ್ನು ಕಂಡುಕೊಳ್ಳಬಲ್ಲ, ಶಾಂತಿ ಸುಖ ನೆಮ್ಮದಿಯ ತಾಣವಾಗಿ ಬದುಕಿನ ನೆಲೆಯನ್ನು ಅರಸಬಲ್ಲ 'ಮನೆ'ಯನ್ನು ಇತರರು ಕಟ್ಟಿಕೊಡಬಲ್ಲರೆ? ಪ್ರತಿಯೊಬ್ಬ ವ್ಯಕ್ತಿ ತನ್ನ 'ಮನೆ'ಯನ್ನು ವಿವಿಧ ನೆಲೆಗಳಲ್ಲಿ ಕಂಡುಕೊಳ್ಳುವಂತಾಗಬೇಕು. ಅದಕ್ಕೆ ನೆರವಾಗಬಲ್ಲ ಸಾಮಾಜಿಕ ಸಾಮರಸ್ಯ, ಸುರಕ್ಷಿತ ಪರಿಸರ, ಸಂಸ್ಕೃತಿ, ಶಿಕ್ಷಣ ಹಾಗೂ ಆರ್ಥಿಕ ಭದ್ರತೆ ದೊರೆತಾಗ ಮಾತ್ರವೇ ನಾವು 'ಮನೆ'ಯನ್ನು ಅದರ ನಿಜವಾದ ಅರ್ಥದಲ್ಲಿ ಕಂಡುಕೊಳ್ಳಬಲ್ಲೆವು. ✿

**ಜೂನ್ ತಿಂಗಳ ಕಾರ್ಯಕ್ರಮಗಳು**

| | |
|---|---|
| ೦೨ ಭಾನುವಾರ | ಏಕಾದಶಿ |
| ೧೭ ಸೋಮವಾರ | ಏಕಾದಶಿ |

# ಮೂರು ಗುಣಗಳು



✤ ಸಂಸಾರಿಗಳಲ್ಲಿ ಸಾತ್ತ್ವಿಕ, ರಾಜಸಿಕ, ತಾಮಸಿಕ ಗುಣದವರು ಇರುವ ಹಾಗೆ ಭಕ್ತಿಯಲ್ಲೂ ಈ ಮೂರು ಗುಣದ ಭಕ್ತಿಗಳಿವೆ.

✤ ಸಂಸಾರಿಗಳಲ್ಲಿ ರಾಜಸಿಕ ಪ್ರವೃತ್ತಿಯುಳ್ಳವರಿದ್ದಾರೆ. ಅವರು ಕೈಗೆ ಚೈನು ಇರುವ ಗಡಿಯಾರ ಕಟ್ಟಿರುತ್ತಾರೆ; ಬೆರಳುಗಳಿಗೆ ಎರಡು ಮೂರು ಉಂಗುರ ಹಾಕಿರುತ್ತಾರೆ. ಮನೆ ಮಟ್ಟುಗಳೆಲ್ಲಾ ಠಾಕುಠೀಕು, ಗೋಡೆಗಳಲ್ಲಿ ರಾಣಿಯ ಮತ್ತು ದೊಡ್ಡ ದೊಡ್ಡ ಮನುಷ್ಯರ ಪಟ ತೂಗಹಾಕಿರುತ್ತಾರೆ. ಮನೆಗೆ ಅಷ್ಟು ಚೆನ್ನಾಗಿ ಸುಣ್ಣ ಒರೆಮಣ್ಣು ಹಾಕಿರುತ್ತಾರೆ. ಒಂದು ಚೂರು ಧೂಳೇ ಆಗಲಿ, ಒಂದು ಬೊಟ್ಟು ಕರೆಯೇ ಆಗಲಿ, ಎಲ್ಲೂ ಕಂಡುಬರುವುದಿಲ್ಲ. ನಾನಾ ಬಗೆಯ ಅಂದಚೆಂದದ ಉಡುಪು ಹಾಕಿಕೊಳ್ಳುತ್ತಾರೆ. ಅವನ ಸೇವಕರಿಗೂ ಒಳ್ಳೊಳ್ಳೆ ಪೋಷಾಕು. ಹೀಗೇ ಇನ್ನೂ ಏನೇನೊ.

✤ ತಾಮಸಿಕ ಸಂಸಾರಿ ನಿದ್ರೆ, ಕಾಮ, ಕ್ರೋಧ, ಅಹಂಕಾರ ಇವುಗಳಿಂದ ತುಂಬಿರುತ್ತಾನೆ.

✤ ಹೀಗೆ ಸಾತ್ತ್ವಿಕಭಕ್ತಿ ಎಂಬುದೂ ಇದೆ. ಸಾತ್ತ್ವಿಕ ಭಕ್ತ ಗೋಪ್ಯವಾಗಿ, ಬಹುಶಃ ಸೊಳ್ಳೆಪರದೆಯೊಳಗೆ ಕುಳಿತು ಧ್ಯಾನ ಮಾಡುತ್ತಾನೆ. ಆತ ನಿದ್ದೆಯಿಂದೇಳಲು ಹೊತ್ತಾಗುತ್ತಿರುವುದನ್ನು ನೋಡಿ ಜನ ಭಾವಿಸಿಕೊಳ್ಳುತ್ತಾರೆ, ಬಹುಶಃ ಆತನಿಗೆ ರಾತ್ರಿ ವೇಳೆ ನಿದ್ದೆ ಬರುತ್ತಿಲ್ಲ ಅಂತ ಕಾಣುತ್ತದೆ ಎಂಬುದಾಗಿ. ಆತನಿಗೆ ತನ್ನ ಶರೀರದ ಮೇಲಿನ ಮಮತೆ ಕೇವಲ ಹಸಿವು ಇಂಗಿಸುವವರೆಗೆ ಮಾತ್ರ. ಒಂದಿಷ್ಟು ಸೊಪ್ಪು ಅನ್ನ ಸಿಕ್ಕಿದರೆ ಸಾಕು. ಊಟದ ಮನೆಯಲ್ಲಿ ವಿಶೇಷವಾದ ವ್ಯವಸ್ಥೆ ಏನೂ ಇಲ್ಲ. ಉಡಿಗೆ ತೊಡಿಗೆಗಳಲ್ಲೂ ಆಡಂಬರವೇನಿಲ್ಲ. ಮನೆಯ ಮುಟ್ಟು ತಟ್ಟುಗಳಲ್ಲಿ ಯಾವ ವಿಧವಾದ ನಯನಾಜೂಕು ಕಂಡುಬರುವುದಿಲ್ಲ. ಆತ ಹೊಗಳುಭಟ್ಟತನ ಮಾಡಿ ಎಂದಿಗೂ ದ್ರವ್ಯ ಸಂಪಾದಿಸುವುದಿಲ್ಲ.

✤ ರಾಜಸಿಕ ಭಕ್ತ ಹಣೆಗೆ ತಿಲಕ ಇಟ್ಟುಕೊಳ್ಳುತ್ತಾನೆ. ಕೊರಳಿಗೆ ರುದ್ರಾಕ್ಷಿಮಾಲೆ ಹಾಕಿ ಕೊಳ್ಳುತ್ತಾನೆ. ಆ ರುದ್ರಾಕ್ಷಿ ಮಾಲೆಯ ಮಧ್ಯೆ ಮಧ್ಯೆ ಚಿನ್ನದ ಮಣಿ ಇರುತ್ತದೆ. ಪೂಜೆ ಸಮಯದಲ್ಲಿ ರೇಶ್ಮೆ ವಸ್ತ್ರ ಉಡುತ್ತಾನೆ.

✤ ತಾಮಸಿಕ ಭಕ್ತನ ಶ್ರದ್ಧೆ ಉಜ್ವಲವಾದ್ದು. ಡಕಾಯಿತರು ದರೋಡೆಮಾಡಿ ಜನರಿಂದ ಹಣ ಕಸಿದುಕೊಳ್ಳುವ ಹಾಗೆ. ಈ ವಿಧದ ಭಕ್ತ ಭಗವಂತನನ್ನು ಬಲಾತ್ಕರಿಸಿ ಆತನಿಂದ ವರ ಪಡೆದುಕೊಳ್ಳುತ್ತಾನೆ. ಡಕಾಯಿತರ ಹಾಗೆ, 'ಬಡಿ! ಹೊಡಿ! ಕಡಿ!' ಎಂಬುದೇ ಈತನ ಮಂತ್ರ.

✤ ದೃಢಭಾವ ಆರೋಪಿಸಿಕೊಂಡು ಹೇಳಬೇಕು: 'ಏನು? ನಾನು ಭಗವತಿಯ ನಾಮ ಜಪಿಸಿದ್ದೇನೆ. ನನ್ನಲ್ಲಿ ಇನ್ನೂ ಪಾಪ ಅಂದರೆ? ನಾನು ಆಕೆಯ ಮಗು, ಆಕೆಯ ಐಶ್ವರ್ಯಕ್ಕೆ ಅಧಿಕಾರಿ.'

✤ ತಮೋಗುಣದ ಗತಿಯನ್ನು ಭಗವಂತನ ಕಡೆಗೆ ತಿರುಗಿಸಿಬಿಟ್ಟದ್ದೇ ಆದರೆ ಆತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ. ಆತನನ್ನು ಬಲಾತ್ಕರಿಸಿ ಕೇಳಿ, ಆತ ಅಪರಿಚಿತನೇನಲ್ಲ, ನಿಮ್ಮವನೇ.

✤ ಇದೇ ತಮೋಗುಣವನ್ನು ಇತರರ ಮಂಗಳಕ್ಕಾಗಿ ಉಪಯೋಗಿಸಬಹುದು. ಡಾಕ್ಟರುಗಳಲ್ಲಿ ಮೂರು ವಿಧ – ಉತ್ತಮ, ಮಧ್ಯಮ, ಅಧಮ. ಯಾವ ಡಾಕ್ಟರ್ ರೋಗಿಯ ನಾಡಿ ಹಿಡಿದು ನೋಡಿ 'ಔಷಧ ಕುಡಿಯಪ್ಪ' ಅಂತ ಹೇಳಿ ಹೊರಟುಹೋಗುತ್ತಾನೊ, ಆತ ಅಧಮ ಡಾಕ್ಟರ್. ರೋಗಿ ಔಷಧ ಕುಡಿದನೊ ಇಲ್ಲವೊ ಎಂಬುದನ್ನು ಆತ ಬಂದು ವಿಚಾರ ಮಾಡುವುದೇ ಇಲ್ಲ. ಮಧ್ಯಮ ಡಾಕ್ಟರ್, ವಿವಿಧ ರೀತಿಯಿಂದ ಔಷಧ ಕುಡಿಯುವಂತೆ ರೋಗಿಗೆ ತಿಳಿಸಿ ಆತನ ಮನಸ್ಸನ್ನು ಒಪ್ಪಿಸಿ ಆತನಿಗೆ ಅಕ್ಕರೆಯಿಂದ ಹೇಳುತ್ತಾನೆ: 'ಎಲಾ ಅಪ್ಪ, ನೀನು ಔಷಧ ಕುಡಿಯದಿದ್ದರೆ ನಿನಗೆ ಹೇಗೆ ಗುಣವಾದೀತು? ಗೆಳೆಯಾ, ಕುಡಿ, ನಾನೇ ಸ್ವತಃ ಔಷಧ ತಯಾರು ಮಾಡಿದ್ದೇನೆ ಕುಡಿ.' ಆದರೆ ಯಾವ ಡಾಕ್ಟರ್ ಯಾವ ವಿಧದಿಂದಲೂ ರೋಗಿ ಔಷಧ ಸೇವಿಸದಿರುವುದನ್ನು ನೋಡಿ ಆತನ ಎದೆಮೇಲೆ ಮಂಡಿಯೂರಿ ಬಲಾತ್ಕಾರದಿಂದ ಆತನಿಗೆ ಕುಡಿಸಿಬಿಡುತ್ತಾನೊ, ಆತನೇ ಉತ್ತಮ ಡಾಕ್ಟರ್. ಈತನಲ್ಲಿ ತಾಮಸಿಕ ಗುಣ ವ್ಯಕ್ತವಾಗಿದೆ. ಈ ಗುಣದಿಂದ ರೋಗಿಗೆ ಒಳ್ಳೆಯದಾಗುತ್ತದೆಯೇ ವಿನಾ ಅಪಕಾರವೇನೂ ಆಗುವುದಿಲ್ಲ.

✤ ಡಾಕ್ಟರುಗಳ ಹಾಗೇ ಆಚಾರ್ಯರಲ್ಲೂ ಮೂರು ವಿಧ. ಅಧಮ ಆಚಾರ್ಯ ಶಿಷ್ಯರಿಗೆ ಉಪದೇಶವಿತ್ತು ಮತ್ತೆ ಅವರು ಬದುಕಿದ್ದಾರೆಯೇ ಸತ್ತರೇ ಎಂಬುದರ ಗೋಜಿಗೇ ಹೋಗುವುದಿಲ್ಲ. ಮಧ್ಯಮ ಆಚಾರ್ಯ ತನ್ನ ಶಿಷ್ಯರ ಶ್ರೇಯೋಭಿವೃದ್ಧಿಯ ದೃಷ್ಟಿಯಿಂದ ತಾನು ಕೊಟ್ಟ ಉಪದೇಶ ಸರಿಯಾಗಿ ಬೇರೂರಲೆಂದು ಅದನ್ನು ಪದೇಪದೇ ಅವರಿಗೆ ತಿಳಿಸುತ್ತಾನೆ. ಬಹಳವಾಗಿ ಅನುನಯ ವಿನಯ ತೋರಿಸುತ್ತಾನೆ. ಪ್ರೀತಿ ತೋರಿಸುತ್ತಾನೆ. ಆದರೆ ಯಾರು ತನ್ನ ಶಿಷ್ಯರು ಯಾವ ವಿಧದಿಂದಲೂ ದಾರಿಗೆ ಬಾರದೆ ಇರುವುದನ್ನು ನೋಡಿ ಕೊನೆಗೆ ಬಲಪ್ರಯೋಗವನ್ನು ಮಾಡಿಯೇಬಿಡುತ್ತಾನೊ, ಆತ ಉತ್ತಮ ಆಚಾರ್ಯ.

'ಶ್ರೀರಾಮಕೃಷ್ಣ ವಚನವೇದ'ದಿಂದ

# ‘ಚಿಕ್ಕಮ್ಮ’ನ ಕಥೆ

ಮೂಲ ಬಂಗಾಳಿ : **ಶಾಂತಿರಾಮ ದಾಸ್**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**



ಜಯರಾಮಬಾಟಿಯ ಪಕ್ಕದ ಹಳ್ಳಿ ಹಳದಿಯಲ್ಲಿ ನಮ್ಮ ಮನೆಯಿತ್ತು. ನಾವು ದೂಲೇ[೧] ಜಾತಿಯವರು. ನಾವು ಶ್ರೀಮಾತೆಯವರನ್ನು ‘ಚಿಕ್ಕಮ್ಮ’ ಎಂದೇ ಕರೆಯುತ್ತಿದ್ದೆವು. ಆದ ಕಾರಣ ನನ್ನ ತಂದೆ ಅವರನ್ನು ‘ಅಕ್ಕ’ ಎಂದು ಕರೆಯುತ್ತಿದ್ದರು. ನನ್ನ ತಂದೆ ಯೋಗೀಂದ್ರ ದಾಸ್ ‘ಚಿಕ್ಕಮ್ಮ’ನ ಪಲ್ಲಕ್ಕಿ ಹೊರುವವರ ಸರ್ದಾರ್ (ಮುಖಂಡ) ಆಗಿದ್ದರು.[೨] ನನ್ನ ತಂದೆಯವರ ಬಳಿ ತಮ್ಮದೇ ಆದ ಪಲ್ಲಕ್ಕಿಯಿತ್ತು – ಎಂಟು ಜನ ಹೊರುವ ಪಲ್ಲಕ್ಕಿ.

ನನ್ನ ತಾಯಿಯವರ ಹೆಸರು ಲಕ್ಷ್ಮೀ. ಅವರು ‘ಚಿಕ್ಕಮ್ಮ’ನ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಕೋಣೆ, ಬಾಗಿಲು ಒರೆಸಿ ಸ್ವಚ್ಛ ಮಾಡುವುದು, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು ಈ ಎಲ್ಲ ಕೆಲಸ ಮಾಡುತ್ತಿದ್ದರು. ಅವರನ್ನು ಚಿಕ್ಕಮ್ಮ ಕರೆಯುತ್ತಿದ್ದುದು ‘ಮಾಝಿ–ಬವು’ (ಅಂಬಿಗರ ಸೊಸೆ) ಎಂದು. ಕೆಲವೊಮ್ಮೆ ‘ಲಕ್ಷ್ಮೀ–ಬವು’ ಎಂದೂ ಕರೆಯುತ್ತಿದ್ದರು. ನನ್ನ ತಂದೆಯವರನ್ನು ಚಿಕ್ಕಮ್ಮ ‘ಯೋಗೀನ್’ ಎಂದು ಹಾಗೂ ಮಹಾರಾಜರುಗಳು ‘ಯೋಗೇ’ ಎಂದೂ ಕರೆಯುತ್ತಿದ್ದರು. ಚಿಕ್ಕಮ್ಮ ಜಯರಾಮಬಾಟಿಯಿಂದ ಕೋಯಲ್‌ಪಾರಾಗೆ ಅಥವಾ ಕಲ್ಕತ್ತೆಗೆ ಹೋಗುವಾಗ ವಿಷ್ಣುಪುರದ ತನಕ ನನ್ನ ತಂದೆಯವರ ಪಲ್ಲಕ್ಕಿಯಲ್ಲಿ ಹೋಗುತ್ತಿದ್ದರು. ನನ್ನ ತಂದೆ ಬಹಳ ಧೈರ್ಯಶಾಲಿಯಾಗಿದ್ದರು. ಜನರು ನನ್ನ ತಂದೆಗೆ ಗೌರವ ಕೊಡುತ್ತಿದ್ದರು. ಆದರೆ ನನ್ನ ತಂದೆ ಚಿಕ್ಕಮ್ಮನಿಗೆ ತುಂಬ ಹೆದರುತ್ತಿದ್ದರು. ಚಿಕ್ಕಮ್ಮ ಒಂದು ಬಾರಿ ನನ್ನ ತಂದೆಯವರಿಗೆ ಕರೆ ಕಳುಹಿಸಿದರೆ, ಅವರು ಒಮ್ಮೆಲೇ ಚಿಕ್ಕಮ್ಮನ ಮನೆಗೆ ಹೋಗಿ, ‘‘ಅಕ್ಕಾ, ನನ್ನನ್ನು ಕರೆ

೧ ಹಿಂದುಳಿದ ವರ್ಗಕ್ಕೆ ಸೇರಿದ ಒಂದು ಜಾತಿ. ಸಾಂಪ್ರದಾಯಿಕವಾಗಿ ಪಲ್ಲಕ್ಕಿ ಹೊರುವವರು.

೨ ಸ್ವಾಮಿ ಈಶಾನಾನಂದರ ‘ಮಾತೃ ಸಾನ್ನಿಧ್ಯೇ’ ಎಂಬ ಗ್ರಂಥದಲ್ಲಿ ಹಳದಿ ಗ್ರಾಮದ ಪಲ್ಲಕ್ಕಿ ಹೊರುವವರ ಸರ್ದಾರ್ ‘ಯೋಗೇ ದೂಲೇ’ ಎಂಬವರ ಉಲ್ಲೇಖವಿದೆ. ಅಲ್ಲಿ, ಯೋಗೇ ದೂಲೇ ಶ್ರೀಮಾತೆಯವರಿಗೆ ಬಹಳ ಪ್ರೀತಿ ಪಾತ್ರನು ಎಂದು ಬರೆದಿದೆ. ಶ್ರೀಮಾತೆಯವರು ಕೊನೆಯ ಬಾರಿ ಜಯರಾಮಬಾಟಿಯಿಂದ ಕಲ್ಕತ್ತೆಗೆ ಹೋದಾಗ ಈ ಯೋಗೇ ದೂಲೇ ಪಲ್ಲಕ್ಕಿಯಲ್ಲೇ ವಿಷ್ಣುಪುರದ ತನಕ ಹೋಗಿದ್ದರು. ಈ ‘ಯೋಗೇ ದೂಲೇ’ಯವರೇ ಶಾಂತಿರಾಮ ದಾಸ್ ಅವರ ತಂದೆ ಯೋಗೀಂದ್ರ ದಾಸ್. *(–ಸಂ)*

ದಿರಾ?'' ಎಂದು ಕೇಳುತ್ತಿದ್ದರು. ಪಲ್ಲಕ್ಕಿ ಹೊರುವ ಕೆಲಸ ಬಿಟ್ಟರೆ ನನ್ನ ತಂದೆ ಆಮೋದರ ನದಿಯಲ್ಲಿ ಅಂಬಿಗನ ಕೆಲಸವನ್ನೂ ಮಾಡುತ್ತಿದ್ದರು. ನದಿಯಲ್ಲಿ ಮೀನು ಹಿಡಿಯುತ್ತಿದ್ದರು ಕೂಡ. ಠಾಕೂರರ ನೈವೇದ್ಯಕ್ಕೆ ಮೀನಿನ ಅಡುಗೆ ಮಾಡುತ್ತಿದ್ದರು. ಅದಕ್ಕೆ ಮೀನನ್ನು ತಂದು ಕೊಡುವ ಜವಾಬ್ದಾರಿಯನ್ನು ಚಿಕ್ಕಮ್ಮ ನನ್ನ ತಂದೆಗೆ ವಹಿಸಿದ್ದರು. ನನ್ನ ತಾಯಿ ಕೂಡ ಒಮ್ಮೊಮ್ಮೆ ಆಮೋದರ ನದಿಯಿಂದ ಚೂನೋ ಮೀನನ್ನು (ಒಂದು ಜಾತಿಯ ಸಣ್ಣ ಮೀನು) ಹಿಡಿದು, ಚಿಕ್ಕಮ್ಮನಿಗೆ ತಂದು ಕೊಡುತ್ತಿದ್ದರು. ತಂದೆಯವರಿಗೆ ಪಲ್ಲಕ್ಕಿ ಹೊರುವ ಕೆಲಸಕ್ಕಾಗಿ ದೂರ ಹೋಗಬೇಕಾಗಿ ಬಂದಾಗಲೆಲ್ಲ ನನ್ನ ತಾಯಿಯವರೇ ಚಿಕ್ಕಮ್ಮನ ಮನೆಗೆ ಮೀನು ತಲುಪಿಸುವ ಕಾರ್ಯವನ್ನು ವಹಿಸಿಕೊಳ್ಳುತ್ತಿದ್ದರು. ಚಿಕ್ಕಂದಿನಲ್ಲಿ ನಾನೂ ಅನೇಕ ಬಾರಿ ಚಿಕ್ಕಮ್ಮನ ಮನೆಗೆ ಮೀನು ತಲುಪಿಸಿ ಬಂದಿದ್ದೇನೆ.

ನಾವು ಅಣ್ಣ-ತಮ್ಮ, ಅಕ್ಕ-ತಂಗಿಯರು ಒಟ್ಟು ಆರು ಜನ. ನನಗಿಂತ ಮೊದಲು ಇಬ್ಬರು ಅಕ್ಕಂದಿರು, ಒಬ್ಬ ಅಣ್ಣ, ಹಾಗೂ ಇಬ್ಬರು ತಂಗಿಯರು. ಮೊದಲಿಗೆ ಮೇಲಿಂದ ಮೇಲೆ ಹೆಣ್ಣು ಮಕ್ಕಳೇ ಹುಟ್ಟಿದಾಗ ನನ್ನ ತಾಯಿ-ತಂದೆಯರಿಗೆ ತುಂಬ ದುಃಖವುಂಟಾಗಿತ್ತು. ಹಳ್ಳಿಯ ಜನ; ತನ್ನದೇ ಆದ ಗಂಡು ಮಗು ಆಗದೆ ಇರುವುದಕ್ಕೆ ನನ್ನ ತಾಯಿಯನ್ನು ಹಲವು ರೀತಿಯಲ್ಲಿ ದೂಷಿಸುತ್ತಿದ್ದರು. ಈ ಮಾತನ್ನೆತ್ತಿ ನನ್ನ ತಂದೆ ಕೂಡ ತಾಯಿಯನ್ನು ಬಯ್ಯುತ್ತಿದ್ದರು, ಹೆಂಡ ಕುಡಿದು ಬಂದು ಹೊಡೆಯುತ್ತಿದ್ದರು. ಒಂದು ದಿನ ರಾತ್ರಿ ಹೊತ್ತು ಹೀಗೆ ಹೆಂಡ ಕುಡಿದು ತಾಯಿಯನ್ನು ಒಂದೇ ಸವನೆ ಹೊಡೆದುಬಿಟ್ಟರು. ಮರುದಿನ ಚಿಕ್ಕಮ್ಮನ ಮನೆಗೆ ಕೆಲಸ ಮಾಡಲು ಹೋಗಿದ್ದಾಗ, ನನ್ನ ತಾಯಿ ಅಳುತ್ತಾ ಎಲ್ಲವನ್ನೂ ಚಿಕ್ಕಮ್ಮನ ಮುಂದೆ ಹೇಳಿದರು. ಅದನ್ನು ಕೇಳಿದ ಚಿಕ್ಕಮ್ಮ ಕೂಡಲೇ ನನ್ನ ತಂದೆಯವರಿಗೆ ಹೇಳಿ ಕಳುಹಿಸಿದರು. ನನ್ನ ತಂದೆ ಭಯದಿಂದ ಚಿಕ್ಕಮ್ಮನ ಮುಂದೆ ನಿಂತುಬಿಟ್ಟರು. ಚಿಕ್ಕಮ್ಮ ತುಂಬ ಆವೇಗ ಹಾಗೂ ಕೋಪದಿಂದ ಕೂಡಿದ ಧ್ವನಿಯಿಂದ ಕೇಳಿದರು: ''ಯೋಗೀನ್, ಈ ರೀತಿ ನೀನು ಸೊಸೆಯನ್ನು ಏಕೆ ಹೊಡೆಯುತ್ತೀಯಾ?'' ಮುಖ ಒಣಗಿಸಿಕೊಂಡು ನನ್ನ ತಂದೆ, ''ಅವಳು ನಿಮ್ಮ ಬಳಿ ನನ್ನ ಬಗ್ಗೆ ದೂರು ಹೇಳಿದ್ದಾಳೆ. ಏನು ಮಾಡಲಿ ಹೇಳಿ, ಅಕ್ಕಾ. ನಮ್ಮ ವಂಶ ಮುಂದುವರಿಯದು – ಈ ದುಃಖದಿಂದ ಅವಳಿಗೆ ಹೊಡೆದೆ'' ಎಂದರು. ಚಿಕ್ಕಮ್ಮ ದೃಢವಾದ ಭಾವದಿಂದ ಹೇಳಿದರು, ''ಇನ್ನು ಮೇಲೆ ಎಂದಿಗೂ ಸೊಸೆಯ ಮೇಲೆ ಕೈ ಮಾಡಬಾರದು – ಹೇಳಿಬಿಟ್ಟಿದ್ದೇನೆ, ನೋಡು. ಯಾವುದೇ ರೀತಿ ಬಯ್ಯಬಾರದು ಕೂಡ. ಗಂಡುಮಗು ಆಗಿಲ್ಲ ಅಂತ ನಿನಗೆ ಹೇಗೆ ದುಃಖವುಂಟಾಗಿದೆಯೋ, ಅವಳಿಗೂ ಅದೇ ರೀತಿ ದುಃಖವಾಗಿದ್ದಿರಬಹುದು. ಪಾಪ, ಅವಳು ಏನು ಮಾಡಿಯಾಳು?'' ನನ್ನ ತಂದೆ ತಲೆತಗ್ಗಿಸಿ, ಸದ್ದಿಲ್ಲದೆ ನಿಂತುಬಿಟ್ಟಿದ್ದರು. ಇದ್ದಕ್ಕಿದ್ದಂತೆ ಚಿಕ್ಕಮ್ಮ ಹೇಳಿದರು, ''ಹೋಗು, ನಾನು ಹೇಳುತ್ತಿದ್ದೇನೆ, ಠಾಕೂರರ ಕೃಪೆಯಿಂದ ಈ ಬಾರಿ ನಿಮಗೆ ಗಂಡುಮಗು ಜನಿಸುವುದು. ಆದರೆ ಸೊಸೆಗೆ ಯಾವತ್ತೂ ಹೊಡೆಯಬೇಡ.''

ಇದಾದ ಮೇಲೆ ನಾನು ಹುಟ್ಟಿದೆ. ನನ್ನ ತಂದೆ ಆನಂದದಿಂದ ಕುಣಿದಾಡುತ್ತಾ ಚಿಕ್ಕಮ್ಮನ ಬಳಿಗೆ ಓಡಿಹೋಗಿ ನನ್ನ ಜನನದ ವಿಷಯವನ್ನು ತಿಳಿಸಿದರು. ಚಿಕ್ಕಮ್ಮ ತುಂಬಾ ಆನಂದಗೊಂಡು ನಗುತ್ತಾ ಹೇಳಿದರು, ''ಈಗ ಶಾಂತಿ ದೊರಕಿತಲ್ಲ! ಮೇಲಿಂದ ಮೇಲೆ ಇಬ್ಬರು ಹೆಣ್ಣುಮಕ್ಕಳು ಹುಟ್ಟಿದರು ಅಂತ ನೀನು ತುಂಬಾ ತಲೆಬಿಸಿ ಮಾಡಿಕೊಂಡಿದ್ದೆ.'' ಚಿಕ್ಕಮ್ಮ ನನಗೆ 'ಶಾಂತಿ' ಎಂದು ಹೆಸರಿಟ್ಟಿದ್ದಾಗಿ ನನ್ನ ತಂದೆ ಭಾವಿಸಿಕೊಂಡರು. ಮನೆಗೆ ಮರಳಿದ ಕೂಡಲೇ ಹೇಳಿದರು, ''ಅಕ್ಕ ಮಗುವಿಗೆ 'ಶಾಂತಿ' ಎಂದು ಹೆಸರಿಟ್ಟಿದ್ದಾರೆ.'' ಹೀಗೆ ನನ್ನ ಹೆಸರು ಶಾಂತಿ ಎಂದಾಯಿತು– ಅಲಂಕಾರಕ್ಕೆ 'ಶಾಂತಿರಾಮ' ಎಂದು ಮಾಡಿದರು. ಚಿಕ್ಕಮ್ಮನ ವರದಿಂದಾಗಿಯೇ ತಾವು ಗಂಡುಮಗುವಿನ ಮುಖ ನೋಡುವಂತಾಯಿತು ಎಂದು ನನ್ನ ತಂದೆ, ತಾಯಿ ಹೇಳುತ್ತಿದ್ದರು. ಇದಕ್ಕೆ ಸಂಬಂಧಿಸಿದಂತೆ ಒಂದು ಘಟನೆಯ ಬಗ್ಗೆ ಹೇಳುತ್ತೇನೆ. ಆಗ ನಾನು ತಾಯ ಗರ್ಭದಲ್ಲಿದ್ದೆ. ಒಂದು ದಿನ ನನ್ನ ತಾಯಿಯವರು ಚಿಕ್ಕಮ್ಮನ ಹೊಸ ಮನೆಗೆ ಸೇರಿದ ಪುಣ್ಯಪುಕುರ ಕೆರೆಯಲ್ಲಿ ಮೀನು ಹಿಡಿಯುತ್ತಿದ್ದರು. ಚಿಕ್ಕಮ್ಮನ ಶಿಷ್ಯ ಬಾಂಕುರದ ವಿಭೂತಿ ಬಾಬು (ವಿಭೂತಿಭೂಷಣ ಘೋಷ್) ಆಗ ಜಯರಾಮಬಾಟಿಯಲ್ಲಿ ತಂಗಿದ್ದರು. ಅವರಿಗೆ ನನ್ನ ತಾಯಿಯ ಪರಿಚಯವಿತ್ತು. ಏಕೆಂದರೆ, ವಿಭೂತಿ ಬಾಬು ಚಿಕ್ಕಮ್ಮನ ಮನೆಗೆ ಆಗಾಗ ಬಂದುಹೋಗಿ ಮಾಡುತ್ತಿದ್ದರು. ನನ್ನ ತಾಯಿ ಕೆರೆಯಲ್ಲಿ ಬಲೆ ಬೀಸಿ ಮೀನು ಹಿಡಿಯುತ್ತಿದ್ದುದನ್ನು ನೋಡಿ ಅವರು ಚಿಕ್ಕಮ್ಮನಿಗೆ ಹೇಳಿದರು, ''ಅಮ್ಮಾ, ಲಕ್ಷ್ಮಿ ಗರ್ಭಿಣಿ; ಅವಳು ಕೆರೆಯಲ್ಲಿ ಈ ರೀತಿ ಮೀನು ಹಿಡಿಯುತ್ತಿದ್ದಾಳೆ, ಹೊಟ್ಟೆಯಲ್ಲಿರುವ ಮಗುವಿಗೆ ಏನೂ ತೊಂದರೆಯಾಗದೆ?'' ಅದಕ್ಕೆ ಚಿಕ್ಕಮ್ಮ ಹೇಳಿದರು, ''ಇಲ್ಲ ಮಗೂ, ಅವರಿಗೆ ವರ ನೀಡಲಾಗಿದೆ.'' ನಾನು ಹುಟ್ಟಿದ ಎರಡು-ಮೂರು ತಿಂಗಳ ನಂತರ ಒಂದು ದಿನ ಚಿಕ್ಕಮ್ಮ ನನ್ನ ತಂದೆಗೆ ಹೇಳಿದರು: ''ಯೋಗೀನ್, ನಿನ್ನ ಮಗನಿಗೆ ಅನ್ನಪ್ರಾಶನ ಮಾಡಿಸುವ ದಿನ ಅವನನ್ನು ನನ್ನ ಬಳಿಗೆ ಕರೆದುಕೊಂಡು ಬಾ. ನಾನು ನಿನ್ನ ಮಗನಿಗೆ ಪ್ರಸಾದ ತಿನ್ನಿಸುತ್ತೇನೆ.'' ನನ್ನ ತಂದೆ ಹೇಳುತ್ತಿದ್ದರು, ಅನ್ನಪ್ರಾಶನದ ದಿನ ಬೆಳಿಗ್ಗೆ ನನ್ನ ತಾಯಿ, ತಂದೆ ಇಬ್ಬರೂ ನನ್ನನ್ನು ಚಿಕ್ಕಮ್ಮನ ಮನೆಗೆ ಕರೆದುಕೊಂಡು ಹೋಗಿದ್ದರು ಅಂತ. ಚಿಕ್ಕಮ್ಮ ರಾಧು-ಅಕ್ಕನ ತಟ್ಟೆಯಲ್ಲಿ ಅನ್ನ, ಹಾಲು ಕಲಸಿ, ನನಗೆ ತಮ್ಮ ಕೈಯಿಂದಲೇ ತಿನ್ನಿಸಿದ್ದರಂತೆ. ಅಂದು ಚಿಕ್ಕಮ್ಮ ನನಗೆ ಒಂದು ಜೊತೆ ಬೆಳ್ಳಿಯ ಬಳೆಯನ್ನೂ ಕೊಟ್ಟಿದ್ದರು. ಆ ಬಳೆಗಳನ್ನು ನಾನು ಇಂದಿಗೂ ಜಾಗರೂಕತೆಯಿಂದ ತೆಗೆದಿಟ್ಟಿದ್ದೇನೆ. ಈಗಲೂ ಅದು ಉತ್ತಮ ಸ್ಥಿತಿಯಲ್ಲಿದ್ದು ಲಕಲಕನೆ ಬೆಳಗುತ್ತಿದೆ. ಕಿಶೋರಿ ಮಹಾರಾಜ್ (ಶ್ರೀಮಾತೆಯವರ ಸೇವಕರಾಗಿದ್ದ ಸ್ವಾಮಿ ಪರಮೇಶ್ವರಾನಂದರು) ನನಗೆ ಹೇಳಿದ್ದರು: ''ಅರೇ, ಶಾಂತಿ, ನಿನ್ನ ಆ ಬಳೆಗಳನ್ನು ಶ್ರೀಮಾತೆಯವರು

ತಮ್ಮ ಕೈಯಿಂದಲೇ ಕೊಟ್ಟಿದ್ದರು. ಅದಕ್ಕೆ ವಿಶೇಷವಾದ ಮೌಲ್ಯವಿದೆ. ನೀನು ಆ ಬಳೆಗಳನ್ನು ನಮಗೆ ಕೊಟ್ಟುಬಿಡು. ಅದನ್ನು ಬೇಲೂರು ಮಠಕ್ಕೆ ಕೊಟ್ಟುಬಿಡುತ್ತೇವೆ. ಶ್ರೀಮಾತೆಯವರು ಸ್ವತಃ ತಮ್ಮ ಕೈಯಿಂದಲೇ ಕೊಟ್ಟ ವಸ್ತುವಲ್ಲವೆ?'' ಆದರೆ ನನಗೆ ಆ ಬಳೆಗಳನ್ನು ಮಹಾರಾಜರಿಗೆ ಕೊಡಲಾಗಲಿಲ್ಲ. ಎಲ್ಲಿಯವರೆಗೆ ನಾನು ಜೀವಿಸಿರುತ್ತೇನೋ ಅಲ್ಲಿಯವರೆಗೂ ಅದನ್ನು ಯಾರಿಗೂ ನೀಡಲು ನನ್ನಿಂದಾಗದು. ಅನೇಕ ಮಂದಿ ಸಾಧುಗಳು ಹಾಗೂ ಭಕ್ತರುಗಳು ಈ ಬಳೆಗಳ ಕಥೆಯನ್ನು ಕೇಳಿ, ಅವನ್ನು ನೋಡಲು ಬಯಸಿದ್ದರು. ನಾನು ಅದನ್ನು ತಂದು ಅವರಿಗೆ ತೋರಿಸಿದಾಗ, ಅವರು ಅದನ್ನು ತಲೆಗೆ ಮುಟ್ಟಿಸಿ ಪ್ರಣಾಮ ಮಾಡುತ್ತಿದ್ದರು. ಚಿಕ್ಕಮ್ಮನ ಆಶೀರ್ವಾದದ ನೆನಪು ನನ್ನ ಜೀವನದಲ್ಲಿ ಅಮೂಲ್ಯವಾದ ಸಂಪತ್ತು; ಆದ್ದರಿಂದ ಯಕ್ಷನ ನಿಧಿಯಂತೆ ಆ ಬಳೆಗಳನ್ನು ನಾನು ಸುರಕ್ಷಿತವಾಗಿ ಇಟ್ಟುಕೊಂಡಿದ್ದೇನೆ. ಪ್ರತಿದಿನವೂ ಅದಕ್ಕೆ ತಲೆ ಮುಟ್ಟಿಸಿ ಪ್ರಣಾಮ ಮಾಡುತ್ತೇನೆ.

ನಾನು ಚಿಕ್ಕಂದಿನಿಂದಲೇ ತಾಯಿಯೊಂದಿಗೆ ಚಿಕ್ಕಮ್ಮನ ಮನೆಗೆ ಹೋಗುತ್ತಿದ್ದೆ. ಆದರೂ, ಚಿಕ್ಕಮ್ಮನನ್ನು ಹಳೆಯ ಮನೆಯಲ್ಲಿ ನೋಡಿದ ನೆನಪು ನನಗಿಲ್ಲ. ಅವರ ಹೊಸ ಮನೆಯಲ್ಲಿ ನೋಡಿದ ನೆನಪು ಮಾತ್ರವೇ ನನ್ನ ಸ್ಮೃತಿಪಟಲದಲ್ಲಿ ಉಳಿದಿದೆ. ಮೊದಲ ಬಾರಿ ಅವರನ್ನು ನಾನು ನೋಡಿದಾಗ ನನಗೆ ಏಳು ಅಥವಾ ಎಂಟು ವರ್ಷ ವಯಸ್ಸು. ಚಿಕ್ಕಮ್ಮನ ಕಾಲುನೀಡಿ ಕುಳಿತ ಭಾವಚಿತ್ರವಿದೆಯಲ್ಲ, ಅದೇ ಭಂಗಿಯಲ್ಲಿ ಅವರನ್ನು ನಾನು ಮೊದಲ ಬಾರಿ ನೋಡಿದೆ. ತಂದೆಯವರು ಹೇಳಿಕೊಟ್ಟಂತೆ, ನಾನು ವರಾಂಡಕ್ಕೆ ಹೋಗಿ ಚಿಕ್ಕಮ್ಮನಿಗೆ ಪ್ರಣಾಮ ಮಾಡಿದೆ. ಚಿಕ್ಕಮ್ಮ ನನ್ನ ಕೆನ್ನೆ ಹಿಂಡಿ ಆದರಿಸಿದರು. ಅನಂತರ ಕೈತುಂಬಾ ತಿನ್ನಲು ಕೊಟ್ಟರು. ನಾನು ಹಾಗೂ ನನ್ನ ಅಕ್ಕ ಇಬ್ಬರೂ ಅಂತಹ ತಿಂಡಿಪದಾರ್ಥಗಳ ಆಸೆಯಿಂದಲೇ ಚಿಕ್ಕಮ್ಮನ ಮನೆಗೆ ಹೆಚ್ಚಾಗಿ ಹೋಗುತ್ತಿದ್ದೆವು. ಅಲ್ಲಿಗೆ ಹೋದಕೂಡಲೇ ಕೈತುಂಬಾ ತಿಂಡಿ ಸಿಗುತ್ತಿತ್ತು. 'ತಿಂಡಿ' ಅಂದರೆ, ಅವಲಕ್ಕಿ ಉಂಡೆ, ಎಳ್ಳುಂಡೆ, ಬೆಲ್ಲದ ಜಿಲೇಬಿ, ಕರಿದ ತಿಂಡಿ – ಇತ್ಯಾದಿ. ಆಗ ಇಂದಿನಂತೆ ಜಯರಾಮಬಾಟಿಯಲ್ಲಿ ಪನೀರ್ ಸಿಹಿತಿಂಡಿ ಸಿಗುತ್ತಿರಲಿಲ್ಲ. ಕೇವಲ ನಮಗಷ್ಟೇ ಅಲ್ಲ ; ಚಿಕ್ಕಮ್ಮನ ಮನೆಗೆ ಹೋದವರಿಗೆಲ್ಲ ಅವರು ಕೈತುಂಬ ಉಂಡೆ ಹಾಗೂ ಇತರ ತಿಂಡಿಗಳನ್ನು ನೀಡುತ್ತಿದ್ದರು.

ರಾಧು ಅಕ್ಕನ ತಾಯಿಗೆ ಮಾನಸಿಕ ತೊಂದರೆ ಇತ್ತು. ಅವರನ್ನು ನಾವೆಲ್ಲ 'ಹುಚ್ಚಿ ಯಜಮಾನಿ' ಎಂದು ಕರೆಯುತ್ತಿದ್ದೆವು. ಅವರು ಚಿಕ್ಕಮ್ಮನಿಗೆ ಆಗಾಗ ಬೈಗುಳದ ಸುರಿಮಳೆ ಹರಿಸುತ್ತಿದ್ದರು. ಒಂದು ಸಲ ಸೌದೆಯಿಂದ ಚಿಕ್ಕಮ್ಮನನ್ನು ಹೊಡೆಯಲು ಅವರು ಹೊರಟಿದ್ದರು. ಈ ಘಟನೆಯನ್ನು ನಾವೇನೂ ನೋಡಿರಲಿಲ್ಲ; ಇತರರಿಂದ ಕೇಳಿದ್ದೆ. ಚಿಕ್ಕಮ್ಮನಿಗೆ ಯಾರ ಬಗೆಗೇ ಆಗಲಿ, ಎಂದಿಗೂ ಕಠೋರವಾದ ಮಾತುಗಳನ್ನಾಡಲು ಸಾಧ್ಯವಾಗುತ್ತಿರಲಿಲ್ಲ, ಆದರೆ ಅಂದು ಮಾತ್ರಅವರ ಬಾಯಿಯಿಂದ ಕಠೋರ



ಶ್ರೀಮಾತೆಯವರ ಹೊಸ ಮನೆ, ಜಯರಾಮಬಾಟಿ

ವಾದ ಮಾತುಗಳು ಹೊರಬಂದವು. ರಾಧು ಅಕ್ಕನ ತಾಯಿ ಸೌದೆಯಿಂದ ಹೊಡೆಯಲು ಹೋಗುತ್ತಿದ್ದುದನ್ನು ನೋಡಿದ ವರದಾ ಮಹಾರಾಜ್ (ಸ್ವಾಮಿ ಈಶಾನಾನಂದ) ಅವರ ಕೈಯಿಂದ ಅದನ್ನು ಕಸಿದುಕೊಂಡರು. ಇಲ್ಲದೆ ಹೋಗಿದ್ದರೆ ಅಂದು ಏನು ನಡೆಯುತ್ತಿತ್ತೋ ಯಾರು ಬಲ್ಲರು? ರಾಧು ಅಕ್ಕನ ತಾಯಿಯ ಗದ್ದಲವನ್ನು ನೋಡಿ ಅಂದು ಚಿಕ್ಕಮ್ಮ ಹೇಳಿದ್ದರು: ''ಹುಚ್ಚಿ! ನೀನು ಇದೇನು ಮಾಡುತ್ತಿದ್ದೀ? ನಿನ್ನ ಈ ಕೈಬಿದ್ದು ಹೋಗುವುದು ನೋಡು.'' ಹಾಗೆ ಹೇಳಿದ ಮೇಲೆ ಚಿಕ್ಕಮ್ಮನ ಪಶ್ಚಾತ್ತಾಪಕ್ಕೆ ಕೊನೆಯೇ ಇರಲಿಲ್ಲ. ಅವರು ಅಳುತ್ತಾ ಹೇಳುತ್ತಿದ್ದರು, ''ಠಾಕೂರ್, ನನ್ನ ಬಾಯಿಂದ ಅದೇನನ್ನು ಹೇಳಿಸಿಬಿಟ್ಟರಿ! ನಾನೇನು ಮಾಡಿಬಿಟ್ಟೆ! ಈ ಬಾಯಿಂದ ಎಂದಿಗೂ ನಾನು ಶಪಿಸಿರಲಿಲ್ಲ. ನೀವು ಅವಳನ್ನು ಕ್ಷಮಿಸಿಬಿಡಿ.'' ಆದರೆ ಆಗಲೇ ಏನಾಗಬೇಕೋ ಅದು ಆಗಿಯೇಬಿಟ್ಟಿತ್ತು. ಚಿಕ್ಕಮ್ಮನ ಬಾಯಿಂದ ಹೊರಬಂದ ಮಾತನ್ನು ಬದಲಿಸಲು ಭಗವಂತನಿಗೂ ಸಾಧ್ಯವಿಲ್ಲ. ನಾವು ನಮ್ಮ ಕಣ್ಣಿಂದಲೇ ಕಂಡಿದ್ದೇವೆ, ರಾಧು-ಅಕ್ಕನ ತಾಯಿಗೆ ಕುಷ್ಠರೋಗ ಬಂದು ಕೈ ಬಿದ್ದು ಹೋಯಿತು. ಚಿಕ್ಕಮ್ಮ ಮನುಷ್ಯರಲ್ಲವೇ ಅಲ್ಲ, ಅವರು ಸಾಕ್ಷಾತ್ ಭಗವತಿ.

ಚಿಕ್ಕಮ್ಮನ ಕಂಠದ ಸ್ವರವೇ ಬೇರೆ ರೀತಿಯದು. ತುಂಬ ಮಧುರವಾದ ಧ್ವನಿ. ನಿಂತು ನಿಂತು, ನಿಧಾನವಾಗಿ ಮಾತನಾಡುತ್ತಿದ್ದರು. ಚಿಕ್ಕಮ್ಮನ ಹೊಸ ಮನೆಯಲ್ಲಿ ಒಂದು ಗಿಳಿಯಿತ್ತು – ಅದರ ಹೆಸರು ಗಂಗಾರಾಮ. ಹಲವು ಬೆಕ್ಕುಗಳೂ ಇದ್ದವು – ಐದಾರು ಇದ್ದಿರಬೇಕು. ಕೆಲವು ಬಿಳಿ, ಕೆಲವು ಕಪ್ಪು-ಬಿಳಿ, ಇನ್ನು ಕೆಲವು ಬಿಳಿ ಹಾಗೂ ಬಂಗಾರದ ಬಣ್ಣಗಳ ಮಿಶ್ರಣ, ಬೇರೆ ಕೆಲವು ಬೂದು ಬಣ್ಣ. ಚಿಕ್ಕಮ್ಮ ಊಟಕ್ಕೆ ಕುಳಿತಾಗ ಬೆಕ್ಕುಗಳೆಲ್ಲ ಅವರ ತಟ್ಟೆಯ ನಾಲ್ಕೂ ದಿಕ್ಕುಗಳಲ್ಲಿ ಸುಮ್ಮನೆ ಕುಳಿತುಬಿಡುತ್ತಿದ್ದವು. ತಮ್ಮ ಊಟವಾದ ಮೇಲೆ ಚಿಕ್ಕಮ್ಮ ಬೆಕ್ಕುಗಳಿಗೆ ಅನ್ನ-ಹಾಲು ಬೆರೆಸಿ ತಿನ್ನಲು ನೀಡುತ್ತಿದ್ದರು. ಬೆಕ್ಕುಗಳ ಭಾಗ್ಯ ಎಂತಹದು ಎಂದು ನೋಡಿ ಹಿಂಸೆಯಾಗುತ್ತಿತ್ತು. ಈಗಲೂ ನೆನೆದರೆ ಹಿಂಸೆಯಾಗುತ್ತಿದೆ. ಗಂಗಾರಾಮನಿಗೂ ಚಿಕ್ಕಮ್ಮ ತಮ್ಮ ಕೈಯಿಂದಲೇ ತಿನ್ನಿಸುತ್ತಿದ್ದರು. ಅವರು ದನಕರುಗಳಿಗೂ ಹಾಗೆಯೇ ತಿನ್ನಿಸುತ್ತಿದ್ದರು.